**OS-267/2022 P.W.1**

ದಿನಾಂಕಃ.01.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

__ಪಾಟೀ ಸವಾಲು ಃ__ ಪ್ರತಿವಾದಿಯ ಪರ ವಕೀಲರಿಂದ ಃ-

ಪ್ರತಿವಾದಿಗಳು ನಮ್ಮ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಮಗೆ ವಂಚನೆ ಮಾಡಿ ಅವರ ಹೆಸರಿಗೆ ಮಾಡಿಸಿರುತ್ತಾರೆ ಆದಕಾರಣ ಈ ದಾವೆಯನ್ನು ಹಾಕಿರುತ್ತೇನೆ. ಸದರಿ ವಿಚಾರವಾಗಿ ನಾನು ಪ್ರತಿವಾದಿಗಳ ವಿರುದ್ದ ಯಾವುದೇ ಕ್ರಿಮಿನಲ್ ಮೊಕದ್ದಮೆ ಸಲ್ಲಿಸಿರುವುದಿಲ್ಲ . ವಾದಿಗಳು ಮತ್ತು 1 ನೇ ಪ್ರತಿವಾದಿಯ ಕುಟುಂಬಗಳು ಬೇರೆ ಬೇರೆ ಎಂದರೆ ಸರಿ. ನಾನು ಬಿ ಎಸ್ಸಿ ಪದವಿದರ. ನಾನು ಪ್ರಸ್ತುತವಾಗಿ ದಾವಣಗೆರೆ ಮತ್ತು ಕಣಬಗಟ್ಟೆಯಲ್ಲಿ ವಾಸವಾಗಿರುತ್ತೇನೆ. ನಾನು ಈ ದಾವೆಯನ್ನು ಸಲ್ಲಿಸುವ ಮುಂಚೆ ದಾವಾ ಸರ್ವೇ ನಂಬರ್ ಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. 1 ನೇ ಪ್ರತಿವಾದಿಯು ನಮ್ಮ ತಾಯಿಯ ಚಿಕ್ಕಪ್ಪ, ಚಿಕ್ಕಪ್ಪನ ಮಗನ ಮಗನ ಹೆಂಡತಿ. ನಮ್ಮ ಮುತ್ತಜ್ಜನ ಹೆಸರು ಹರಿಅಜ್ಜ. ಹರಿಅಜ್ಜ ರವರಿಗೆ ಶಿವಲಿಂಗಜ್ಜ, ಬಸಪ್ಪ, ನಾಗಪ್ಪ ಮಕ್ಕಳು. ಶಿವಲಿಂಗಜ್ಜನ ಹರಿಯಪ್ಪನ ಮಕ್ಕಳು ದಿನಾಂಕ 31.12.1958 ರಂದು ತಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ವಿಭಾಗದ ಪ್ರಕಾರ ಅವರವರ ಹಿಸ್ಸೆಗೆ ಬಂದ ಆಸ್ತಿಗಳನ್ನು ಅವರೇ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನೋಂದಣಿ ವಿಭಾಗಪತ್ರದ ಮೂಲಕ ಶಿವಲಿಂಗಜ್ಜನ ಮಕ್ಕಳಾದ ಗಂಗಾಧರಪ್ಪ, ಚಂದ್ರಪ್ಪ ಮತ್ತು ಶಿವಮೂರ್ತಪ್ಪ ಮತ್ತು ದೇವಿರಪ್ಪ ರವರಿಗೆ ಸರ್ವೇ ನಂಬರ್ 39/3 ರಲ್ಲಿ ಇರುವ 3 ಎಕರೆ 4 ಗುಂಟೆ ಆಸ್ತಿ ಬಂದಿದೆ ಎಂದರೆ ಸರಿ. ಗಂಗಾಧರಪ್ಪನಿಗೆ ಇಬ್ಬರು ಮಕ್ಕಳು. ಅವರು ಕೆ ಜಿ ವೀರಣ್ಣ ಮತ್ತು ಶಿವಕುಮಾರ್. ದಿನಾಂಕ 18.03.1976 ರಂದು ತಮ್ಮ ಕುಟುಂಬದಲ್ಲಿ ಆದ ವಿಭಾಗ ಪತ್ರದ ಮೂಲಕ ಸದರಿ ಸರ್ವೇ ನಂಬರ್ ನಲ್ಲಿ 1 ಎಕರೆ 22 ಗುಂಟೆ ನೋಂದಣಿ ವಿಭಾಗ ಪತ್ರದ ಮೂಲಕ ಗಂಗಾಧರಪ್ಪ ರವರಿಗೆ ಬಂದಿರುತ್ತದೆ

ಎಂದರೆ ಸರಿ. ಗಂಗಾಧರಪ್ಪನ ಮಗನಾದ ಶಿವಕುಮಾರ್ ರವರ ಪತ್ನಿಯೇ ಈ ದಾವೆಯ 1 ನೇ ಪ್ರತಿವಾದಿ ಎಂದರೆ ಸರಿ. ಗಂಗಾದರಪ್ಪ ರವರ ಮಕ್ಕಳು ಶಿವಕುಮಾರ್ ಮತ್ತು ವೀರಣ್ಣ ರವರು 1995 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1995 ರಲ್ಲಿ ವಿಭಾಗದ ಪ್ರಕಾರ ದಾವಾ ಶೆಡ್ಯೂಲ್ ಸ್ವತ್ತು 1 ನೇಪ್ರತಿವಾದಿಯಾದ ಶಿವಕುಮಾರ್ ರವರ ಗಂಡನ ಹೆಸರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾವಿತ್ರಮ್ಮ ಕೋಂ ತೋಟಪ್ಪ ನಮ್ಮ ತಾಯಿ ಎಂದರೆ ಸರಿ.

ದಾವಾ ಸ್ವತ್ತು ಎಂ ಆರ್ 11/1993-94 ರಂತೆ ಕೈ ಬರಹದ ಪಹಣಿ ಪತ್ರಿಕೆಯಲ್ಲಿ ನಮ್ಮ ತಾಯಿಯ ಹೆಸರು ನಮೂದಾಗಿದೆ ಎಂದರೆ ಸರಿ. ಸದರಿ ಮ್ಯುಟೇಷನ್ ಅನ್ನು ನಾನು ನೋಡಿರುತ್ತೇನೆ. ಯಾವ ದಾಖಲಾತಿಯ ಆಧಾರದ ಮೇಲೆ ಸದರಿ ದಾವಾ ಆಸ್ತಿಯು ತಮ್ಮ ತಾಯಿಯವರ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿಯು ಪೌತಿ ವಾರಸು ಮುಖಾಂತರ ಖಾತೆ ಆಗಿದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವಾ ಆಸ್ತಿಯ ಖಾತೆಯು ನಮ್ಮ ತಾಯಿಯವರಿಗೆ ವರ್ಗಾವಣೆ ಆಗುವ ಮೊದಲು ದಾವಾ ಆಸ್ತಿಯ ಖಾತೆಯು ನಮ್ಮ ತಾಯಿಯ ತಾಯಿಯ ಹೆಸರಿನಲ್ಲಿ ಇತ್ತು. ಈ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿ ಪಹಣಿ ಪತ್ರಿಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾವಿತ್ರಮ್ಮ ರವರು ದಾವಾ ಆಸ್ತಿಯನ್ನು ಅಕ್ರಮವಾಗಿ ಖಾತೆ ಮಾಡಿಕೊಂಡಿರುವ ಬಗ್ಗೆ ಪ್ರಶ್ನಿಸಿ ತರೀಕೆರೆಯ ಎ ಸಿ ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ನಮಗೆ ನೋಟೀಸ್ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ತರೀಕೆರೆ ಉಪ ವಿಭಾಗಾದಿಸಿಯವರು ಆರ್ ಎ ನಂಬರ್ 334/ 2017-18 ರಲ್ಲಿ ಸಾವಿತ್ರಮ್ಮ ಕೋಂ ತೋಟಪ್ಪ ರವರ ಹೆಸರಿನಲ್ಲಿ ಇದ್ದ ದಾವಾ ಆಸ್ತಿಯ ಖಾತೆ ರದ್ದುಪಡಿಸಿ 1 ನೇ ಪ್ರತಿವಾದಿಯ ಹೆಸರಿಗೆ ನಮೂದು ಮಾಡಲು ತರೀಕೆರೆ ತಹಸೀಲ್ದಾರ್ ರವರಿಗೆ ನಿರ್ದೇಶನ

ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆ ಪ್ರಸ್ತುತವಾಗಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ದಾವಾ ಅಸ್ತಿಯ ಖಾತೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದನ್ನು ಪ್ರಶ್ನಿಸಿ ನಾವು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಸದರಿ ಮೇಲ್ಮನವಿ ಇತ್ಯರ್ಥ ಆಗಿರುವುದಿಲ್ಲ. ತಾವು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಖಾತೆಯನ್ನು ಪ್ರಶ್ನೆ ಮಾಡಿ ಜಿಲ್ಲಾಧಿಕಾರಿಗಳ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ ಬಗ್ಗೆ ದಾಖಲೆಹಾಜರುಪಡಿಸಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ಮಾವನಾದ ಗಂಗಾಧರಪ್ಪ ರವರಿಗೆ 1976 ರಲ್ಲಿ ದಾವಾ ಆಸ್ತಿ ವಿಭಾಗದ ಮೂಲಕ ಬಂದಿದ್ದು ಅಲ್ಲಿಂದ ಇಲ್ಲಿಯತನಕ 1 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡ ಸೇನೆಯಲ್ಲಿ Leftinent Carnel ಉದ್ಯೋಗ್ಯದಲ್ಲಿ ಇದ್ದರು. 1 ನೇ ಪ್ರತಿವಾದಿ ಕ್ಯಾನ್ಸರ್ ನಿಂದ ಬಳಲುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಒಬ್ಬಳೇ ಮಗಳು ಇರುತ್ತಾರೆ.

1 ನೇ ಪ್ರತಿವಾದಿಯು ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದ ಕಾರಣ ದಾವಾ ಆಸ್ತಿ ನೋಡಿಕೊಳಳಲು ಆಗದ ಕಾರಣ 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿಯು ದಾವಾ ಆಸ್ತಿಗೆ ಸಂಬಂದಪಟ್ಟಂತೆ ಖಾತೆ ಮಾಡಿಸಿಕೊಳ್ಳಲು ಹೋದಾಗ ನಾವು ತಕರಾರನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ಅನಂತರ ನಾವು ಪ್ರಸ್ತುತ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ. 3 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ಪುನಃ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೂ ಮತ್ತು ತಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳುತಮಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**OS-267/2022 P.W.1**

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.